೧	೨	೩
೯೮. ಇಂಡಿಯನ್ ರೀವ್ಯೂ ಆಫ್ ಮ್ಯಾನೇಜ್‌ಮೆಂಟ್ ಅಂಡ್ ಫ್ಯೂಚರ್	ದೆಹಲಿ	೧,೦೦೦-೦೦
೯೯. ಫಾರಮರ್ಸ್ ಪಾರ್ಲಿಮೆಂಟ್	ದೆಹಲಿ	೫೦೦-೦೦
೧೦೦. ಸೈನ್ಸಸ್ ಬೋರ್ಡ್	ಕೊಚ್ಚಿನ್	೧,೦೦೦-೦೦
೧೦೧. ಆಲ್ ಇಂಡಿಯಾ ಬಾಯ್ಸ್ ಅಂಡ್ ಸ್ಕೌಟ್ಸ್	ದೆಹಲಿ	೫೦-೦೦
೧೦೨. ಕಿಸಾನ್ ವರ್ಡ್, ಆಂಗ್ಲ	ಮದ್ರಾಸ್	೧,೦೦೦-೦೦
೧೦೩. ಜ್ಞಾನಾನಂದ ಸೇವಾಶ್ರಮಂ	ಮದ್ರಾಸ್	೧,೦೦೦-೦೦
೧೦೪. ಸಬಿತ, ಓರಿಯಾ ವಾರ ಪತ್ರಿಕೆ	ಬೆರಹಾಂಪುರ	೧,೦೨೦-೦೦
೧೦೫. ಹೂಲಿ ಎಂಗಲ್ಸ್ ಟ್ರಸ್ಟ್	ಬಾಂಬೆ	೧,೦೦೦-೦೦
೧೦೬. ಗೋವಾಂತಕ	ಪಣಜಂ ಗೋವಾ	೧,೦೦೦-೦೦
೧೦೭. ನವಹಿಂದ್	ಪಣಜಂ ಗೋವಾ	೧,೯೮೦-೦೦
೧೦೮. ಸುನಾಪರಂಜನ್	ಗೋವಾ	೨,೪೦೦-೦೦
೧೦೯. ತತ್ವಲೋಕ (ಆಂಗ್ಲ)	ಮದ್ರಾಸ್	೧,೬೦೦-೦೦
೧೧೦. ತುಳುವರೆ	ದೆಹಲಿ	೧೪,೦೦೦-೦೦
೧೧೧. ಎಂಪ್ಲಾಯೀಸ್ ವೋರಂ	ಕಲ್ಕತ್ತ	೧೬,೦೨೦-೦೦
೧೧೨. ಈ ನಾಡು (ವಿಶ್ರಿತ)	ಹೈದರಾಬಾದ್	೫೪,೦೦೦-೦೦
	ಮೊತ್ತ	೫೮,೧೦,೦೫೩-೦೦

ರಾಜ್ಯದಲ್ಲಿ ಇರುವ ನಗರ ಯೋಜನಾ ಪ್ರಾಧಿಕಾರಗಳಂ

೧೪೨೧. ಶ್ರೀ ಎನ್. ಎಂ. ಅಡ್ಯಂತಾಯ (ಸುರತ್ಕಲ್).—ಮಾನ್ಯ ನಗರಾಭಿವೃದ್ಧಿ ಹಾಗೂ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಟೌನ್ ಪ್ಲಾನಿಂಗ್ ಕಾಯ್ದೆಯಡಿ ಅಸ್ತಿತ್ವದಲ್ಲಿರುವ ನಗರ ಯೋಜನಾ ಪ್ರಾಧಿಕಾರಗಳಿಷ್ಟು ?

ಆ) ಸದರಿ ಪ್ರಾಧಿಕಾರಗಳು ಸ್ಥಾಪನೆಗೊಂಡಾಗಿನಿಂದ ಮಾಡುತ್ತಿರುವ ಕಾರ್ಯಗಳೇನು ?

ಇ) ಟಿ.ಸಿ.ಎ. ಗಳ ಕಾರ್ಯ ನಿರ್ವಹಣೆಯನ್ನು ಹೆಚ್ಚು ಸಮರ್ಪಕಗೊಳಿಸಲು ಸರ್ಕಾರ ಯೋಚಿಸಿದೆಯೇ ?

ಈ) ಹಾಗಿದ್ದಲ್ಲಿ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—

ಅ) ೨೪ ಯೋಜನಾ ಪ್ರಾಧಿಕಾರಗಳಿದ್ದು, ಅವುಗಳಲ್ಲಿ ೨೧ನ್ನು ಅಭಿವೃದ್ಧಿ ಪ್ರಾಧಿಕಾರಗಳನ್ನಾಗಿ ಮಾರ್ಪಡಿಸಿದ್ದು, ಈಗಾಗಲೇ ೬ ಕಾರ್ಪೊರೇಷನ್ ಇರುವ ಸ್ಥಳಗಳಲ್ಲಿ ಅಭಿವೃದ್ಧಿ, ಪ್ರಾಧಿಕಾರಗಳ ಅಧ್ಯಕ್ಷರು ಹಾಗೂ ಸದಸ್ಯರನ್ನು ದಿನಾಂಕ ೧೬-೫-೮೮ರಂದು (ಅಧಿಕಾರೇತರ ಸದಸ್ಯರನ್ನು ಬಿಟ್ಟು) ನೇಮಿಸಿ, ಆದೇಶ ಹೊರಡಿಸಲಾಗಿದೆ.

ಆ) ಸ್ಥಳೀಯ ಯೋಜನಾ ಪ್ರಾದೇಶದ ಭೂ ಬಳಕೆಯ ನಕ್ಷೆ ತಯಾರಿಸುವುದು ಮತ್ತು ಸರ್ಕಾರದಿಂದ ಅಂಗೀಕಾರ ಪಡೆದು ಅನಂತರ ಕ್ರಮ ಬದ್ಧವಾಗಿ ಅನುಷ್ಠಾನಗೊಳಿಸುವುದು. ಮತ್ತು ಯೋಜನಾ ಪ್ರದೇಶಗಳ ಅನಧಿಕೃತ ಬೆಳವಣಿಗೆಗಳನ್ನು ತಡೆಯುವುದು.

ಇ) ಹೌದು.

ಈ) ಅಭಿವೃದ್ಧಿ ಪ್ರಾಧಿಕಾರಗಳನ್ನು ರಚಿಸುವುದು.

ಯಾದಗಿರಿ ವಿಭಾಗದಲ್ಲಿ ಅಭಿವೃದ್ಧಿ ಕಾರ್ಯಗಳಿಗಾಗಿ ಜಿಲ್ಲಾ ಪರಿಷತ್‌ವತಿಯಿಂದ ಖರ್ಚು ಮಾಡಿದ ಹಣದ ಬಗ್ಗೆ

೧೬೨೮. ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ (ಗುರುಮಿಟ್ಕಲ್).—ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ವಕ್ಫ್ ಮತ್ತು ಪಶುಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಗುಲ್ಬರ್ಗಾ ಜಿಲ್ಲಾ ಪರಿಷತ್ತಿನವರು ಯಾದಗಿರಿ ವಿಭಾಗದ ಎಕ್ಸಿಕ್ಯೂಟಿವ್ ಇಂಜಿನಿಯರವರಿಗೆ ಅಭಿವೃದ್ಧಿ ಕಾರ್ಯಗಳಿಗಾಗಿ ಬಿಡುಗಡೆ ಮಾಡಿರುವ ಹಣವೆಷ್ಟು (ತಾಲ್ಲೂಕುವಾರು ವಿವರ ನೀಡುವುದು).

ಆ) ಸದರಿ ವಿಭಾಗದಲ್ಲಿ ಈವರೆಗೆ ಅಭಿವೃದ್ಧಿ ಕಾರ್ಯಗಳಿಗಾಗಿ ವೆಚ್ಚ ಮಾಡಿರುವ ಹಣವೆಷ್ಟು? (ಉಪ ವಿಭಾಗದ ವಿವರ ನೀಡಬೇಕಾಗಿ ವಿನಂತಿಸುವುದು).

ಇ) ಯಾದಗಿರಿ ಉಪ ವಿಭಾಗಕ್ಕೆ ವಿವಿಧ ಅಭಿವೃದ್ಧಿ ಕಾರ್ಯಗಳಿಗಾಗಿ ೧೯೮೫ನೇ ಜನವರಿ ಫೆಬ್ರುವರಿ ಮತ್ತು ಮಾರ್ಚಿ ಮಾಹೆಗಳಲ್ಲಿ ಬಿಡುಗಡೆ ಮಾಡಿರುವ ಹಾಗೂ ವೆಚ್ಚ ಮಾಡಿರುವ ಹಣ ವೆಷ್ಟು ?

ಶ್ರೀ ಅಬ್ದುಲ್ ನಜೀರ್ ಸಾಬ್ (ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

ಅ) ಅನುಬಂಧ ಎ ನಲ್ಲಿ ಕೊಡಲಾಗಿದೆ.

ಆ) ಅನುಬಂಧ ಎ ನಲ್ಲಿ ಕೊಡಲಾಗಿದೆ.

ಇ) ಅನುಬಂಧ ಬಿ ನಲ್ಲಿ ಕೊಡಲಾಗಿದೆ.